ಕನ್ನಡಪ್ರಭ

# ಜೈನ್ ವಿಶ್ವವಿದ್ಯಾಲಯಕ್ಕೆ ನ್ಯಾಕ್ 'ಎ' ಗ್ರೇಡ್

ಬೆಂಗಳೂರು: ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ)ದ ರಾಷ್ಟ್ರೀಯ ಮೌಲ್ಯಮಾಪನಾ ಮತ್ತು ಮಾನ್ಯತಾ ಪರಿಷತ್(ನ್ಯಾಕ್) ನಗರದ ಜೈನ್ ಸ್ವಾಯತ್ತ ವಿಶ್ವವಿದ್ಯಾಲಯಕ್ಕೆ 'ಎ' ಗ್ರೇಡ್ ಗೌರವವನ್ನು ಘೋಷಿಸಿದೆ. ನ್ಯಾಕ್ ಪ್ರತಿನಿಧಿಗಳ ತಂಡ ಕಳೆದ ಜೂನ್ ತಿಂಗಳಲ್ಲಿ ಜೈನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ವಿವಿಯಲ್ಲಿನ ಉನ್ನತ ಶಿಕ್ಷಣ, ಸಂಶೋಧನೆ, ಶೈಕ್ಷಣಿಕ ಗುಣಮಟ್ಟ ಮತ್ತು ಉದ್ಯಮಶೀಲತೆ ಕುರಿತು ಪರಿಶೀಲಿಸಿ ಯುಜಿಸಿಗೆ ವರದಿ ಸಲ್ಲಿಸಿತ್ತು. ಈ ವರದಿ ಪರಿಗಣಿಸಿರುವ ನ್ಯಾಕ್, ಜೈನ್ ವಿವಿಗೆ 'ಎ' ಗ್ರೇಡ್ ನೀಡಿದೆ. ಈ ಅಂಶವು ವಿವಿಯ ಪಠ್ಯ ಸಂಬಂಧ ವಿಷಯಗಳು, ಬೋಧನೆ, ಮೌಲ್ಯಮಾಪನ ಮತ್ತು ಸಂಶೋಧನೆಗಳಲ್ಲಿ ಮತ್ತಷ್ಟು ಬೆಳೆಯಲು ಸಹಕಾರಿಯಾಗಿದೆ. ಅಲ್ಲದೆ, ವಿವಿಯಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿಶ್ವ ಮಟ್ಟದಲ್ಲಿ ಎದುರಾಗುವ ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನೆರವಾಗಲಿದೆ ಎಂದು ವಿವಿ ಕುಲಪತಿ ಡಾ.ಎನ್.ಸುಂದರರಾಜನ್ ತಿಳಿಸಿದ್ದಾರೆ.